ಕಾಣಿಸುವುದಷ್ಟೇ ಅಲ್ಲ, ಸ್ವತಃ ನಕ್ಸಲರನ್ನೇ ಆ ಕುರಿತು ಪ್ರಶ್ನಿಸಿಯೂ ಇದ್ದಾರೆ. ಅದೇ ಸಮಯದಲ್ಲಿ ಪ್ರಭುತ್ವ, ಇಡೀ ನಕ್ಸಲ್ ಚಳವಳಿಯನ್ನು ಅರ್ಥ ಮಾಡಿಕೊಳ್ಳಲು ಸತತವಾಗಿ ಸೋಲುತ್ತಿರುವುದನ್ನೂ, ಆ ಸೋಲನ್ನು ಸಮರ್ಥಿಸಿಕೊಳ್ಳಲು ನಕ್ಸಲರ ಬಗೆಗೆ ಅಸಂಖ್ಯಾತ ಮಿಥ್ಯೆಗಳನ್ನು ಹುಟ್ಟುಹಾಕುವ ಕುತಂತ್ರದ ಬಗ್ಗೆ, ಕಾಡಿನ ಸಂಪತ್ತನ್ನು ಕೊಳ್ಳೆಹೊಡೆಯಲು ಹೊಂಚು ಹಾಕುತ್ತಿರುವ 'ಕಂಪನಿ'ಗಳ ಆಷಾಢಭೂತಿತನವನ್ನೂ ಅವರು ಯಾವ ಹಿಂಜರಿಕೆಯೂ ಇಲ್ಲದೆ ಎತ್ತಿ ತೋರಿಸುತ್ತಾರೆ.

ಈ ಎರಡೂ ತುದಿಗಳ ನಡುವೆ ನಲುಗುತ್ತಿರುವ ಆದಿವಾಸಿಗಳ ಬದುಕಿನ ಬರ್ಬರತೆ ಆಶುತೋಷ್ ಅವರನ್ನು ಇನ್ನಿಲ್ಲದಂತೆ ಕಾಡಿದೆ. ಕುರಿಕಾಯುವ ಹದಿಹರೆಯದ ಹುಡುಗಿ ಸೈನಿಕರ ಅತ್ಯಾಚಾರಕ್ಕೆ ಬಲಿಯಾಗಿದ್ದು, ಹತ್ತಾರು ಹೆಣಗಳನ್ನು ಹತ್ತಿರದಿಂದ ಇರಿದು ನಕಲಿ ಪೋಸ್ಟ್‌ಮಾರ್ಟಮ್ ರಿಪೋರ್ಟ್ ಸೃಷ್ಟಿ ಮಾಡುವುದು, ಪೊಲೀಸರ ಬೇಹುಗಾರ ಎಂಬ ಅನುಮಾನದಲ್ಲಿ ಅಮಾಯಕರ ಹಳ್ಳಿಗರನ್ನು ಹೊಡೆದು ಕೊಲ್ಲುವಂತೆ ನಕ್ಸಲರು ಅಪ್ಪಣೆ ನೀಡುವುದು – ಇಂಥ ಹತ್ತು ಹಲವು ಘಟನೆಗಳು ಪುಸ್ತಕದುದ್ದಕ್ಕೂ ಇಡಿಕಿರಿದಿವೆ. ಕಥೆ ಕಟ್ಟಲು ಹೋದವನೇ ಕಥನದ ಭಾಗವಾಗುವ ವಿಪರ್ಯಾಸವೂ ಇದೆ.

ಇಡೀ ಪುಸ್ತಕದುದ್ದಕ್ಕೂ ಒಂದು ದಟ್ಟ ವಿಷಾದ ಅಂತರ್ವಾಹಿನಿಯಂತೆ ಹರಿಯುತ್ತ ಹೋಗಿರುವುದನ್ನು ಗುರ್ತಿಸಬಹುದು. ಆ ವಿಷಾದದಲ್ಲಿ ಅಸಹಾಯಕತೆಯೂ ಇದೆ. ಈ ಕಥನವನ್ನು ಹೇಳಲೇಬೇಕಾದ ಅಂತರಂಗದ ಒತ್ತಡದ ಜೊತೆಗೆ, ಇದರ ಸಾರ್ಥಕತೆ ಏನು ಎಂಬ ಪ್ರಶ್ನೆಯೂ ಇದೆ. ಇದನ್ನು ನಾವು ನಕ್ಸಲ್‌ಕಥನವಾಗಿಯಲ್ಲ, ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿರುವ ಕಾಡಿನ, ಅದರ ಒಡಲಲ್ಲಿ ಜಗತ್ತನ್ನು ಕಟ್ಟಿಕೊಂಡಿದ್ದ ಆದಿವಾಸಿಗಳ ಅತಂತ್ರಗೊಳ್ಳುತ್ತಿರುವ ಬದುಕಿನ ಕಥನವಾಗಿಯೇ ನೋಡಬೇಕು.

ರಾಮಾಯಣದಲ್ಲಿ ಬರುವ ದಂಡಕಾರಣ್ಯದ ಉಲ್ಲೇಖವೂ ಈ ಕೃತಿಯಲ್ಲಿದೆ. ಋಷಿಮುನಿಗಳ ಸಾಧನೆಯ ತಾಣವಾದ ದಂಡಕಾರಣ್ಯ ರಣಭೂಮಿಯ ರೂಪ ತಾಳಿಬಿಟ್ಟಿದೆ ಎನ್ನುವ ಲೇಖಕರು, ಸೀತೆಗೆ ಈ ವಿನಾಶದ ಸುಳಿವು ಆಗಲೇ ಸಿಕ್ಕಿತ್ತೆಂದು ಕಾಣುತ್ತದೆ ಎನ್ನುತ್ತಾರೆ. ದಂಡಕಾರಣ್ಯ ಪ್ರವೇಶಿಸುತ್ತಲೇ ಅವಳು ಮೂರು ಕಾಮಜನ್ಯ ವ್ಯಸನಗಳ ಬಗ್ಗೆ ರಾಮನಿಗೆ ಹೇಳುತ್ತಾಳೆ. 'ಮಿಥ್ಯಾಭಾಷಣ', 'ಪರಸ್ತ್ರೀ ಗಮನ' ಎಂಬ ಎರಡು ವ್ಯಸನಗಳು ರಾಮನಲ್ಲಿ ಇರುವುದಿಲ್ಲ. ಆದರೆ ಮೂರನೇ ವ್ಯಸನದ ಬಗ್ಗೆ ರಾಮ ಜಾಗರೂಕನಾಗಿರಬೇಕು ಎಂದು ಸೀತೆ ಹೇಳುತ್ತಾಳೆ. ಅದು, 'ಶತ್ರುತ್ವವಿಲ್ಲದವರ ಬಗೆಗಿನ ಕ್ರೌರ್ಯ'. 'ನೀವು ಬಿಲ್ಲು-ಬಾಣಗಳನ್ನು ಹಿಡಿದು ಕಾಡಿಗೆ ಬಂದಿದ್ದೀರಿ. ಇಲ್ಲಿ ಅವೆಷ್ಟೋ ವನಚರ ಪ್ರಾಣಿಗಳು ನಿಮ್ಮೆದುರಿಗೆ ಬರುತ್ತವೆ. ನಿಮಗೆ ಅವುಗಳ ಮೇಲೆ ಬಾಣ ಪ್ರಯೋಗ ಮಾಡುವ ಆಸೆಯಾಗಬಹುದು' ಅನ್ನುತ್ತಾಳೆ. ಹಾಗೆಯೇ 'ಅಸ್ತ್ರಗಳ ಸಹವಾಸದಿಂದ ಮನುಷ್ಯ ಭ್ರಷ್ಟನಾಗುತ್ತಾನೆ, ನಷ್ಟವಾಗುತ್ತಾನೆ' ಎಂದೂ ಹೇಳುತ್ತಾಳೆ.

ಇಂದು ಅದೇ ದಂಡಕಾರಣ್ಯದಲ್ಲಿ ಶಸ್ತ್ರಾಸ್ತ್ರಗಳು ಮೊರೆಯುತ್ತಿವೆ. ಪ್ರಭುತ್ವ ಮತ್ತು ನಕ್ಸಲರ ನಡುವಿನ ಘರ್ಷಣೆಯಲ್ಲಿ ಕಾಡು ಸೊರಗುತ್ತಿದೆ. ಅಲ್ಲಿನ ಜನರ ಜೀವನ ನಷ್ಟವಾಗುತ್ತಿದೆ.

ನಕ್ಸಲ್ ಚಳವಳಿಯನ್ನು, ಅವರ ಕಾರ್ಯತಂತ್ರವನ್ನು, ಅರ್ಥಮಾಡಿಕೊಳ್ಳಲು ಮನಸ್ಸೇ ಇಲ್ಲದಂತೆ ವರ್ತಿಸುತ್ತಿರುವ ಸರ್ಕಾರಗಳ ನಡೆಯನ್ನು ಗುರ್ತಿಸುವ ಆಶುತೋಶ್, ಈಗ ಕ್ಷೀಣಿಸುತ್ತಿರುವಂತೆಯೇ ತೋರುತ್ತಿರುವ ನಕ್ಸಲ್ ಚಳವಳಿ ಹೊಸ ರೂಪದಲ್ಲಿ, ಹೊಸ ತೀವ್ರತೆಯಲ್ಲಿ ಮತ್ತೆ ಭುಗಿಲೇಳಬಹುದಾದ ಸಾಧ್ಯತೆಯ ಕುರಿತೂ ಸೂಚ್ಯವಾಗಿ ಸೂಚಿಸುತ್ತಾರೆ. ಈ ಪುಸ್ತಕವನ್ನು ಕೊನೆಗೊಳಿಸುವುದು ಹೀಗೆ: 'ದೇಶದ ಸೇನೆ ಯುದ್ಧದಲ್ಲಿ ಗೆಲ್ಲದಿದ್ದರೆ, ಅದು ಸೋತಿತೆಂದೇ ಅರ್ಥ; ಆದರೆ ಗೆರಿಲ್ಲಾ ಸೇನೆ ಯುದ್ಧದಲ್ಲಿ ಸೋಲದಿದ್ದರೆ, ಅದು ಗೆದ್ದಂತೆಯೇ ಲೆಕ್ಕ'.

ಕಾರ್ತಿಕ್ ಆರ್. ಅವರು 'ಸತ್ತವರ ಸೊಲ್ಲು' ಎಂಬ ಹೆಸರಿನಲ್ಲಿ ಕನ್ನಡಕ್ಕೆ ಅನುವಾದಿಸಿರುವ ಈ ಪುಸ್ತಕವನ್ನು ಛಂದಪುಸ್ತಕ ಪ್ರಕಟಿಸಿದೆ. ಖಂಡಿತವಾಗಿಯೂ ಇದು ಇತ್ತೀಚೆಗಿನ ಮಹತ್ವದ ಮತ್ತು ಓದಲೇಬೇಕಾದ ಅನುವಾದಿತ ಕೃತಿ.

●